**ಓಎಸ್ – 623/2016**
**ಪಿ ಡಬ್ಲ್ಯೂ-1 ಶಶಿಕಲಾ ಬಿ**

ಮಧ್ಯಂತರ ಅರ್ಜಿ ಸಂಖ್ಯೆ 7 ಮತ್ತು 8 ರ ಆದೇಶದ ಪ್ರಕಾರ ದಿನಾಂಕ 26.07.2023 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಕೆ ಆರ್ ಬಿ ವಕೀಲರಿಂದ

**ನಾನು ಈ ಕೆಳಕಂಡ ದಾ ಖಲೆಗಳನ್ನು ಹಾಜರುಪಡಿಸಿದ್ದೇನೆ.**

1. 2 ಪಹಣಿ ಪತ್ರಿಕೆಗಳನ್ನು ನಿಪಿ -8 ಮತ್ತು ನಿಪಿ - 9 ಎಂದು ಗುರುತಿಸಲಾಯಿತು .

ಪಾಟೀ ಸವಾಲುಃ ಪ್ರತಿವಾದಿಯರ ಪರ ಎ ಜಿ ಪಿ

ನಾನು ಈ ದಾವೆಯನ್ನು ಕುಮ್ಕಿ ಹಕ್ಕಿನ ಸಲುವಾಗಿ ಸಲ್ಲಿಸಿದ್ದೇನೆ . ಸರ್ವೆ ನಂಬ್ರ 126/1 ಅದರ ವಿಸ್ತೀರ್ಣ 1 ಎಕರೆ 50 ಸೆಂಟ್ಸ್ . ವಿಸ್ತೀರ್ಣವನ್ನು ನಾನು ಅಂದಾಜು ಹೇಳಿದ್ದೇನೆ . ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ನಾನು ಅಳತೆ ಮಾಡಿಸಿಲ್ಲ . ಪ್ರತಿವಾದಿಯರು ಸದ್ರಿ ಬಿ ಶೆಡ್ಯೂಲ್ ಆಸ್ತಿಯಲ್ಲಿ ಸ್ಮಶಾನ ಮಾಡಲು ಪ್ರಯತ್ನಿಸಿದ್ದಕ್ಕೆ ಈ ದಾವೆಯನ್ನು ಸಲ್ಲಿಸಿದ್ದೇನೆ . ನಮ್ಮ ಜಾಗದ ಪಕ್ಕದ ವ್ಯಕ್ತಿಗಳು ಅಕ್ರಮಣ ಮಾಡಲು ಪ್ರಯತ್ನಿಸಿದ್ದರು. ಪಕ್ಕದ ಜಾಗದ ವ್ಯಕ್ತಿಗಳ ವಿರುದ್ಧ ನಾನು ಕಾನೂನು ಕ್ರಮ ಕೈಗೊಂಡಿಲ್ಲ . ಅಕ್ರಮಣ ಮಾಡಲು ಪ್ರಯತ್ನಿಸಿದ ವ್ಯಕ್ತಿಗಳಿಗೆ ನಾವು ನೋಟಿಸನ್ನು ನೀಡಿದ್ದೇವು . ಪ್ರತಿವಾದಿಯರು ನಮಗೆ ಯಾವುದೇ ತೊಂದರೆಯನ್ನು ಕೊಟ್ಟಿಲ್ಲ . ನೇರೆ ಕೆರೆಯವರು ತೊಂದರೆ ಮಾಡಿದಕ್ಕೆ ಈ ದಾವೆಯನ್ನು ಸಲ್ಲಿಸಿದ್ದಿರಿ ಎಂದರೆ ಸರಿ . ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಗಡಿ ಗುರುತುಗಳು ಇಲ್ಲ . ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಸ್ಮಶಾನ ಮಾಡಲು ಪ್ರಯತ್ನಿಸುತ್ತಿರುವ ಬಗ್ಗೆ ನಾನು ಮಾಹಿತಿ ಹಕ್ಕಿನ ಅಡಿಯಲ್ಲಿ ತಹಶೀಲ್ದಾರ ಕಚೇರಿ ಬಂಟ್ವಾಳದಲ್ಲಿ ದಾಖಲೆಗಳನ್ನು ಪಡೆದುಕೊಂಡು ನೋಡಿದ್ದೇನೆ . ಆ ದಾಖಲೆಗಳು ನನ್ನ ಹತ್ತಿರ ಇರುತ್ತವೆ . ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಸ್ಮಶಾನ ಮಾಡುತ್ತಿರುವ ಬಗ್ಗೆ ಯಾವುದೇ ಆದೇಶ ನನ್ನ ಹತ್ತಿರ ಇಲ್ಲ .

2. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ರಸ್ತೆ ಇರುವುದಿಲ್ಲ . ನಿಪಿ - 6 ದಾಖಲೆಯನ್ನು ಪ್ರೂಫ್ ಸಲುವಾಗಿ ಹಾಜರುಪಡಿಸಿದ್ದೇನೆ . ನಿಪಿ - 6 ದಾಖಲೆಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ದಾವಾ ಬಿ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ . ಸದ್ರಿ ಆಸ್ತಿಯು ಸರಕಾರಕ್ಕೆ ಸಂಬಂಧಿಸಿದ ಜಮೀನು ಎಂದರೆ ಸರಿ ಸಾಕ್ಷಿ ಮುಂದುವರಿದು ಸದ್ರಿ ಜಮೀನು ನಮ್ಮ ವರ್ಗದ ಪಕ್ಕದಲ್ಲಿ ಇರುವುದರಿಂದ ಅದು ನಮ್ಮ ಕುಮ್ಕಿ ಜಮೀನು ಆಗಿರುತ್ತದೆ . ದಾವೆ ಮಾಡಲು ಯಾವುದೇ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ . ವಾದ ಪತ್ರದಲ್ಲಿ ಬರೆಯಿಸಿದ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ . ಇತರ ವ್ಯಕ್ತಿಗಳು

ಅತಿಕ್ರಮಣ ಮಾಡಲು ಪ್ರಯತ್ನಿಸಿದ ವಿಷಯವನ್ನು ಹೇಳಿ ಈ ಪ್ರತಿವಾದಿಯರ ಮೇಲೆ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಪ್ರವಾದಿಯರು ದಾವಾ ಬಿ ಶೆಡ್ಯೂಲ್ ಆಸ್ತಿಯ ಮೇಲೆ ಯಾವುದೇ ರೀತಿಯಿಂದ ಅತಿಕ್ರಮಣ ಮಾಡಲು ಪ್ರಯತ್ನಿಸದಿದ್ದರು ಕೂಡಾ ಅವರ ಮೇಲೆ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಈ ದಾವೆಯಲ್ಲಿ ಯಾವುದೇ ಕಾರಣ ಉಂಟಾಗದೆ ಇರುವುದರಿಂದ ಪ್ರತಿವಾದಿಯರ ವಿರುದ್ಧ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ, ದ.ಕ.